


**ಪಾತಾಳ ಬಿಲಕ್ಕೆ ಬಾಗಿಲಿದು ದಲ್
ಘೋರಾಂಧಕಾರಕ್ಕೆ ಮಾಡಿದ ಕೂಪಂ...**
ದುರ್ಯೋಧನ ಮೈಮರೆಸಿಕೊಂಡ ವೈಶಂಪಾಯನ ಸರೋವರದ ಬಗ್ಗೆ ಪಂಪನ ವರ್ಣನೆ ಇದು. 41 ಕಾರ್ಮಿಕರು ಸಿಕ್ಕಿಬಿದ್ದ ಉತ್ತರಕಾಶಿಯ ಸುರಂಗವೂ ಪಾತಾಳಬಿಲದಂತೆ, ಘೋರ ಅಂಧಕಾರದ ಕೂಪದಂತೆ ಅನೇಕರಿಗೆ ಕಂಡಿದ್ದರೆ ಆಶ್ಚರ್ಯವಿಲ್ಲ.

ಕಾರ್ಯಾಚರಣೆಗೆ ಇಳಿದೇ ಬಿಟ್ಟಿತು. ಗುಹೆಯ ಒಂದು ಭಾಗದಲ್ಲಿ ಹುಡುಗರ ಶೂ ಗುರುತು ಕಂಡ ರಕ್ಷಣಾ ತಂಡಕ್ಕೆ ಅವರು ಒಳಗೆ ಸಿಕ್ಕಿ ಹಾಕಿಕೊಂಡಿದ್ದಾರೆನ್ನುವುದು ಖಚಿತವಾಯಿತು. ಆದರೆ ಅವರೆಲ್ಲ ಜೀವಂತ ಇದ್ದಾರೋ ಇಲ್ಲವೋ ಎಂಬ ದೊಡ್ಡ ಗೊಂದಲವಿತ್ತು.

ಹೊರಗಡೆ ಮಳೆ ಧೋ ಎಂದು ಸುರಿಯುತ್ತಿತ್ತು. ಪ್ರವಾಹ ಹೆಚ್ಚುತ್ತಲೇ ಇತ್ತು. ಅಮೆರಿಕ, ಬ್ರಿಟನ್, ಬೆಲ್ಜಿಯಂ, ಸ್ಕ್ಯಾಂಡಿನೇವಿಯಾ, ಆಸ್ಟ್ರೇಲಿಯಾದಿಂದೆಲ್ಲ ತಜ್ಞರು ಬಂದಿದ್ದರು. ಮಳೆ ಹೆಚ್ಚಿದಂತೆ ಗುಹೆ ನೀರಿನಿಂದ ತುಂಬುತ್ತಾ ಹೋಯಿತು. ಗುಹೆ ಒಳಗೆ ಹೋಗುವುದೇ ದುಸ್ತರವಾಗಿತ್ತು.

ಬ್ರಿಟಿಷ್ ಮುಳುಗು ತಜ್ಞರಾದ ಜಾನ್ ವೊಲನ್‌ಥೆನ್ ಮತ್ತು ರಿಕ್ ಸ್ಟಾನ್ಟನ್ ಇನ್ನು ತಡ ಮಾಡುವುದು ಸರಿಯಲ್ಲ ಎಂದು ಈಜು ಪರಿಕರ ಏರಿಸಿಕೊಂಡು ಬಗ್ಗಡದ ನೀರಿಗೆ ಇಳಿದೇಬಿಟ್ಟರು. ಈಜಿ ಈಜಿ ನಾಲ್ಕು ಕಿ.ಮೀ. ದೂರ ಕ್ರಮಿಸಿದ ಬಳಿಕ ಬಂಡೆಯ ಮೇಲೆ ಆಯಾಸಗೊಂಡು ಬಿದ್ದಿದ್ದ ಕೋಚ್ ಮತ್ತು ವಿದ್ಯಾರ್ಥಿಗಳು ಕಾಣಿಸಿದರು. ದೂರದಿಂದ ನೋಡಿದಾಗ ಪ್ರಾಣ ಹೋದಂತೆ ಕಾಣಿಸುತ್ತಿತ್ತು. ಹೇಗಾದರಾಗಲಿ, ಮೊದಲು ಹೊರಗೆ ಕರೆದುಕೊಂಡು ಹೋದರಾಯಿತು ಎಂದು ಎಲ್ಲರನ್ನೂ ಎಬ್ಬಿಸಲು ಪ್ರಯತ್ನಿಸಿದಾಗ ರಕ್ಷಣಾ ತಜ್ಞರನ್ನು ಕಂಡ ವಿದ್ಯಾರ್ಥಿಗಳು ಪ್ರಮುಖ ಪಂದ್ಯ ಗೆದ್ದಷ್ಟೇ ಖುಷಿಪಟ್ಟರು.

ಜುಲೈ 2ರಂದು ತಂಡವನ್ನು ಕಂಡ ಮುಳುಗು ತಜ್ಞರು ತಾವು ತೆಗೆದುಕೊಂಡು ಹೋಗಿದ್ದ ನೀರು ಮತ್ತು ಬ್ರೆಡ್ ನೀಡಿ ಸಂತೈಸಿದ್ದರು. ಬ್ಲಾಂಕೆಟ್ ಹೊದಿಸಿ, ಔಷಧಿ ನೀಡಿ ಧೈರ್ಯ ಹೇಳಿದ್ದರು. ತಜ್ಞರು ಕೊಟ್ಟ ಹಗ್ಗ ಹಿಡಿದು ಸುರಕ್ಷಿತವಾಗಿ ಹೊರಬಂದರು. ಗುಹೆಯ ರಾಡಿ ನೀರಿನಿಂದ, ಕತ್ತಲಿನಿಂದ ಅವರೆಲ್ಲರು ಹೊರಬರುವ ಹೊತ್ತಿಗೆ 18 ದಿನಗಳಾಗಿದ್ದವು.

ಹದಿನೆಂಟು ದಿನಗಳ ಕಾಲ ಕುಡಿಯಲು ನೀರು, ತಿನ್ನಲು ಆಹಾರವಿಲ್ಲದೆ ಹುಡುಗರು ಪವಾಡವೆಂಬಂತೆ ಬದುಕಿ ಬಂದಿದ್ದು ಸಾಹಸವೇ ಸರಿ. ಜಗತ್ತಿನ ಇದುವರೆಗಿನ ರಕ್ಷಣಾ ಕಾರ್ಯಗಳಲ್ಲೇ ಇದು ಅತ್ಯಂತ ರೋಚಕ ಕಾರ್ಯಾಚರಣೆ ಎಂದು ದಾಖಲಾಗಿದೆ. ಹುಡುಗರ ರಕ್ಷಣೆಗಾಗಿ ಸುಮಾರು ಹತ್ತು ಸಾವಿರ ಜನ ಶ್ರಮಿಸಿದ್ದರು. ಥಾಯ್ಲೆಂಡ್ ನೌಕಾದಳದ ಸಮನ್ ಕುನನ್ ಈ ರಕ್ಷಣಾ ಕಾರ್ಯದಲ್ಲಿ ಜೀವ ತ್ಯಜಿಸಿದ್ದು ಕಹಿ ನೆನಪಾಗಿಯೇ ಉಳಿಯಿತು. ಈ ಘಟನೆಯನ್ನಾಧರಿಸಿ, 'ದಿ ರೆಸ್ಕ್ಯೂ', 'ಥರ್ಟೀನ್ ಲೈವ್ಸ್' ಮತ್ತು 'ಅಗೇನಸ್ಟ್ ದ ಎಲಿಮೆಂಟ್ಸ್' ಎಂಬ ಸಿನಿಮಾಗಳು ತಯಾರಾಗಿ ಸೂಪರ್ ಹಿಟ್ ಆದವು. ಹಲವಾರು ಪುಸ್ತಕಗಳು ಪ್ರಕಟವಾದವು.

### 33 ಜನ 69 ದಿನ!

ಅದು 2010ರ ಆಗಸ್ಟ್ 5ರ ಮಧ್ಯಾಹ್ನ. ಅದು ಚಿಲಿ ದೇಶದ ತಾಮ್ರದ ಗಣಿ. ಅಲ್ಲಿ ತಾಮ್ರಕ್ಕಿಂತ ಚಿನ್ನವೇ ಹೆಚ್ಚಾಗಿತ್ತು. 'ಆಳ ಅಗೆದಷ್ಟೂ ಸಂಪನ್ಮೂಲ ದುಪ್ಪಟ್ಟು' ಎಂಬ ಧ್ಯೇಯದೊಂದಿಗೆ ಗಣಿಯ ಆಳ 2300 ಅಡಿ ತಲುಪಿತ್ತು. ಮೆಟ್ಟಿಲು ಮೆಟ್ಟಿಲಾಗಿ ಕೊರೆದು ಕೆಳಗಿಳಿದವರಿಗೆ ಮೇಲಿನ ಪದರ ಕುಸಿಯುತ್ತದೆಂಬ ಯಾವ ಕಲ್ಪನೆಯೂ